"ಒಂಚೂರು ಸೋಪು ಕೊಡ್ರೀ. ಬಟ್ಟೆ ಸೋಪಾದ್ರೂ ಆಯ್ತು."

ಯಾವುದೋ ಒಂದು. ಪುಣ್ಯಮ್ಮ ಮಗನನ್ನು ತಿಕ್ಕಿ ತೊಳೆದು ಲಕಲಕ ಮಾಡುತ್ತಿದ್ದಳು. ತಾನು ಉಟ್ಟ ಸೀರೆಯ ಸೆರಗಿನಿಂದ ತಲೆ, ಮೈ ವರೆಸುತ್ತಿದ್ದಳು. "ಒಂಚೂರು ಕೊಬ್ರಿ ಎಣ್ಣೆ ಕೊಡ್ರೀ..." ಎಂದು ಅವಳು ಅಂಗೈ ಕುಳಿ ಮಾಡಿ ಮುಂದೆ ಹಿಡಿದರೆ ಅರ್ಧ ಲೋಟ ಕೊಬ್ರಿ ಎಣ್ಣೆ ಹಿಡಿಯುವಷ್ಟು ಆಳವಾಗುತ್ತಿತ್ತು ಅಂಗೈ ಕುಳಿ. ಮಕ್ಕಳಿಗೇನು, ಅಡಿಗೆಮನೆಯಲ್ಲಿದ್ದಿದ್ದನ್ನು ತಂದು ಧಾರಾಳವಾಗಿ ಬಗ್ಗಿಸಿಬಿಡುತ್ತಿದ್ದೆವು. ಪುಣ್ಯಮ್ಮನಿಗೆ ಈ ಗುಟ್ಟು ಗೊತ್ತಿರಲೇಬೇಕು. ಅವಳು ಏನಾದರೂ ಕೇಳಬೇಕೆಂದರೆ ನಮ್ಮಮ್ಮ ಒಳಗಿಲ್ಲದ ಸಮಯ ಸಾಧಿಸಿ ಮನೆಮಕ್ಕಳನ್ನು ತಿರಿಯುತ್ತಿದ್ದಳು. ಕೈಲಿದ್ದ ಅಷ್ಟೂ ಎಣ್ಣೆಯನ್ನು ಮಗನ ನೆತ್ತಿಯ ಒಳಗಿಳಿಯುವಂತೆ ಗಸಗಸ ತಿಕ್ಕಿ, ಉಳಿದ ಎಣ್ಣೆಯನ್ನು ಅವನ ಕೈಕಾಲುಗಳಿಗೆ ಬಳಿದು, ಕೈಯಲ್ಲಿ ಇನ್ನೂ ಅಲ್ಪಸ್ವಲ್ಪ ಉಳಿದಿರಬಹುದಾದ ಜಿಡ್ಡಿನ ಶೇಷವನ್ನು ದಂಡ ಮಾಡದೆ ತನ್ನ ತಲೆಗೂದಲಿಗೆ ಸವರಿಕೊಂಡು ಕೃತಾರ್ಥಳಾಗುತ್ತಿದ್ದಳು ಪುಣ್ಯಮ್ಮ. ಉಣ್ಣಲು ಕೂತಾಗ ಮನೆ ಮಂದಿ ಕೂತ ಉದ್ದಾನುದ್ದದ ಪಂಕ್ತಿಯಲ್ಲಿ ಈ ತಾಯಿ, ಮಗನಿಗೆ ಸ್ಥಾನವಿಲ್ಲ, ಅವರಿಬ್ಬರಿಗೆ ಅಡ್ಡಪಂಕ್ತಿ. ಪುಣ್ಯಮ್ಮ ಮನೆಯೊಳಗೆ ಸಲೀಸಾಗಿ ಓಡಾಡಲು ಪರವಾನಗಿ ಇದ್ದರೂ ಅಡಿಗೆಮನೆ, ದೇವರಮನೆಗಳಿಗೆ ಪ್ರವೇಶವಿಲ್ಲ. ಏರುಪ್ರಾಯದಲ್ಲಿ ಗಂಡನನ್ನು ಕಳೆದುಕೊಂಡ ಪುಣ್ಯಮ್ಮ ನಂತರದ ವರ್ಷಗಳಲ್ಲಿ ಯಾರಿಗೋ ಬಸುರಾಗಿ ಹುಟ್ಟಿದವನು ಈ ಮಗ. ಮನೆಯ ಜನ ಹೊರಗಟ್ಟಿದ್ದರು. ಕುಲಸ್ಥರು ಜಾತಿಯಿಂದ ಹೊರಗಿಟ್ಟಿದ್ದರು. ಹೀಗೆ ನಿಷ್ಕರುಣೆಯಿಂದ ವರ್ತಿಸಿ ಜೀರ್ಣಿಸಿಕೊಳ್ಳುವುದು ಆ ಕಾಲದಲ್ಲಿ ಸಲೀಸಾದ ವ್ಯವಹಾರ ಆಗಿತ್ತು. ಬ್ರಾಹ್ಮಣ ವಿಧವೆಗೋ ಅಥವಾ ಕನ್ಯೆಗೋ ಅನೈತಿಕವಾಗಿ ಹುಟ್ಟಿದ ಸಂತಾನಕ್ಕೆ, ಮುಂದಿನ ಅವರ ತಲೆಮಾರಿಗೆ ಒಂದು ನಿರ್ದಿಷ್ಟ ಹೆಸರೂ ಕೂಡಾ ಚಾಲ್ತಿಯಲ್ಲಿತ್ತು. ಈ ಕುರಿತಾಗಿ ಕತೆಯೊಂದರಲ್ಲಿ ಪ್ರಸ್ತಾಪಿಸಿ ಮೈಸೂರಿನ ಓದುಗ ಮಹಿಳೆಯೊಬ್ಬರು ಖಾರವಾಗಿ ಪ್ರತಿಕ್ರಿಯಿಸಿದ ಅನುಭವ ನನ್ನಲ್ಲಿ ಹಸಿರಾಗಿದೆ. 'ನಮ್ಮಷ್ಟಕ್ಕೆ ನಾವು ಮರ್ಯಾದೆಯಿಂದ ಬದುಕು ಕಟ್ಟಿಕೊಂಡು ಜೀವನ ನಡೆಸುತ್ತಿರುವಾಗ ಯಾಕೆ ವೃಥಾ ಹಳೆಯದನ್ನು ಕೆದಕುತ್ತೀರಿ? ನಿಮಗೆ ಭಾರೀ ಗೊತ್ತಿದೆ ಎಂದು ತೋರಿಸಿಕೊಳ್ಳುತ್ತೀರಿ?' ಎನ್ನುವಂತಾ ಅರ್ಥ ಬರುವ ಪತ್ರ. ಅವರ ಪ್ರಕಾರ ಅವರು ಹೇಳಿದ್ದರಲ್ಲಿ ತಪ್ಪೇನಿರಲಿಲ್ಲ. ಉದ್ದೇಶಪೂರ್ವಕವಾಗಿ ಯಾರನ್ನೋ ನೋಯಿಸಬೇಕೆಂದು ಸಮಾಜದಲ್ಲಿ ಅಂತವರಿಗಿದ್ದ ಹೆಸರನ್ನು ನಾನು ಪ್ರಸ್ತಾಪಿಸಿದ್ದೂ ಅಲ್ಲ. 'ಹೀಗಿತ್ತು' ಅನ್ನುವುದರ ಕುರಿತಾಗಿಯಷ್ಟೇ ನನ್ನ ಪ್ರಸ್ತಾವನೆ ಇತ್ತು. ಪ್ರಚಲಿತದಲ್ಲಿದ್ದ ಕ್ರೂರ ಪದ್ಧತಿಯೊಂದರಿಂದ ಸಂಬಂಧಿಸಿದ ಹೆಣ್ಣಿಗೆ, ಮುಂದಿನ ಸಂತಾನಕ್ಕೆ ಜಾತಿಯಿಂದ ಬಹಿಷ್ಕರಿಸುವ ಶಿಕ್ಷೆಯಾಗುವುದಾದಲ್ಲಿ ಸಂಬಂಧಪಟ್ಟ ಗಂಡಿಗೆ ಮಾತ್ರಾ ಯಾಕೆ ವಿನಾಯಿತಿ ಎನ್ನುವುದು ಆಗಲ್ಲದಿದ್ದರೂ ನಂತರದ ದಿನಗಳಲ್ಲಿ ತಲೆ ತಿಂದ ಪ್ರಶ್ನೆ. 'ಹೆಣ್ಣಿಗೊಂದು ನ್ಯಾಯ, ಗಂಡಿಗೊಂದು ನ್ಯಾಯ' ಎನ್ನುವುದು ಸಮಾಜದಲ್ಲಿ ಸಹಜವಾಗಿ ಸ್ವೀಕೃತವಾಗಿ ರೂಢಿಗತವಾಗಿ ಬಂದಿದ್ದರ ಕುರಿತು ವಿರೋಧದ ದನಿ ಎತ್ತಬೇಕೆಂಬ ತಿಳಿವಳಿಕೆ ಹೆಣ್ಣಿಗೆಲ್ಲಿತ್ತು? ಹಾಗೆ ವಿರೋಧಿಸಿದವರ ದನಿಗೆ ದನಿಗೂಡಿಸುವ ಸ್ಥೈರ್ಯ, ಧೈರ್ಯ ಯಾರಿಗಿತ್ತು? ಹಿಂದೊಂದು ಕಾಲದ ಅಡ್ಡಪಂಕ್ತಿ, ಭೇದಭಾವ, ಜಾತಿಸೂಚಕ ಹೆಸರು ಕ್ರಮೇಣ ಕಾಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಅವರೂ ಮುಖ್ಯ ವಾಹಿನಿಗೆ ಸೇರ್ಪಡೆಯಾಗಿದ್ದು ಸಂತೋಷದ, ಸಮಾಧಾನದ ಸಂಗತಿ. ಈ ಕುರಿತು ಹೇಳುವಾಗ ಚಿಕ್ಕಂದಿನಲ್ಲಿ ನಾನು ಕೇಳಿದ ಸತ್ಯ ಘಟನೆಯೊಂದರ ಕುರಿತು ನೆನಪಾಗುತ್ತಿದೆ. ಹೀಗೇ ಒಂದು ಸಂಪ್ರದಾಯಸ್ಥ ಕುಟುಂಬದಲ್ಲಿ